ಓ.ಎಸ್ ನಂ. 37/2022 ಪಿ.ಡಬ್ಲೂಃ 1

ದಿನಾಂಕಃ 11.10.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು

ಮುಖ್ಯ ವಿಚಾರಣೆ ಅರ್ಜಿದಾರರ ಪರ ವಕೀಲರಿಂದ

ನಾನು ನನ್ನ ಮುಖ್ಯ ವಿಚಾರಣೆಯ ಸಲುವಾಗಿ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ. ಅದರಲ್ಲಿ ಹೇಳಿರುವ ಸಂಗತಿಗಳು ಸತ್ಯವಾಗಿರುತ್ತವೆ. ಅವುಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ. ಸದರಿ ಅಂಶಗಳನ್ನು ವಕೀಲರಿಗೆ ನಾನೇ ಹೇಳಿ ಬರೆಸಿರುತ್ತೇನೆ.

ನಾನು ಪ್ರಕರಣಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ಹಾಜರುಮಾಡಿದ್ದು ಅವುಗಳನ್ನು ನಿಶಾನೆಗಳಾಗಿ ಗುರುತಿಸಲು ಕೋರುತ್ತೇನೆ.

ವಂಶವೃಕ್ಷ ನಿಪಿ 1, ಜಮೀನು ಭೂಸ್ವಾಧೀನವಾದ ಬಗ್ಗೆ ಭೂ ಸ್ವಾಧೀನ ಅಧಿಕಾರಿಗಳು ಹೊರಡಿಸಿರುವಂತಹ 4(1) ನೋಟಿಫಿಕೇಷನ್ ನಿಪಿ 2, ಹಿಂಬರಹ ನಿಪಿ 3, ಮತ್ತೊಂದು ಹಿಂಬರಹ ನಿಪಿ 4, ಸಾಗುವಳಿ ಪತ್ರದ ಧೃಢೀಕೃತ ನಕಲು ನಿಪಿ 5, ಪೋಡಿ ನಕ್ಷೆಯ ಧೃಢೀಕೃತ ನಕಲು ನಿಪಿ 6, ಅಧಿಕೃತ ಜ್ಞಾಪನ ನಿಪಿ 7, ಪೋಡಿ ನಕ್ಷೆ ನಿಪಿ 8, ಅಫೀಷಿಯಲ್ ಮೆಮೋರಂಡಂ ನಿಪಿ 9, ಗ್ರಾಂಟ್ ಸರ್ಟಿಫೀಕೇಟ್‌ನ ಧೃಢೀಕೃತ ನಕಲು ನಿಪಿ 10, ಅಧಿಕೃತ ಜ್ಞಾಪನದ ಧೃಢೀಕೃತ ನಕಲು ನಿಪಿ 11, ಪೋಡಿ ನಕ್ಷೆಯ ಧೃಢೀಕೃತ ನಕಲು ನಿಪಿ 12, ಗ್ರಾಂಟ್ ಸರ್ಟಿಫಿಕೇಟ್‌ನ ಧೃಢೀಕೃತ ನಕಲು ನಿಪಿ 13, ಪೋಡಿ ನಕ್ಷೆಯ ಧೃಢೀಕೃತ ನಕಲು ನಿಪಿ 14, ಅಧಿಕೃತ ಜ್ಞಾಪನ ನಿಪಿ 15, ಆಕಾರ್ ಬಂಧ್ ದುರಸ್ತ್ ನಿಪಿ 16, ನಮೂನೆ 5 ರ ಧೃಢೀಕೃತ ನಕಲು ನಿಪಿ 17, ಕರ್ದಾ ಪಟ್ಟಿ ನಿಪಿ 18, ಇಪ್ಪತ್ತೇಳು ಪಹಣಿ ಪತ್ರಿಕೆಗಳನ್ನು ನಿಪಿ 19 ರಿಂದ 45, ಎರಡು ಮುಟೇಷನ್‌ಗಳನ್ನು ನಿಪಿ 46 ಮತ್ತು 47 ಎಂದು ಗುರುತಿಸಲಾಯಿತು.

ಶ್ರೀ. ಕೆ.ಜಿ.ಜೆ. ವಕೀಲರು ಗೈರುಹಾಜರು, ಯಾವುದೇ ಪ್ರತಿವಾದ ಪತ್ರವನ್ನು ಸಲ್ಲಿಸಿರುವುದಿಲ್ಲ. ಆ ಕಾರಣದಿಂದ ಪಾಟೀಸವಾಲು ಶ್ರೀ. ಕೆ.ಜಿ.ಜೆ. ವಕೀಲರ ಪರವಾಗಿ ಇರುವುದಿಲ್ಲ ಎಂದು ತೆಗೆದುಕೊಳ್ಳಲಾಯಿತು.

ಶ್ರೀ. ಎಂ.ಈ.ಎಸ್. ವಕೀಲರು ಪಾಟೀಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ

(ಅಮರ್ ವಿ.ಎಲ್.)

ಸೀನಿಯರ್ ಸಿವಿಲ್ ಜಡ್ಜ್ ಮತ್ತು
ಜೆಎಂಎಫ್‌ಸಿ ಹೊಳೆನರಸೀಪುರ